ಮೂಲ ದಾವೆ ನಂ. 48/2019

ಪಿ.ಡಬ್ಲ್ಯೂ.01

ದಿನಾಂಕಃ 20.06.2023
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಯು ಕೆ ವಕೀಲರಿಂದಃ-

6. ದಾವಾ ಆಸ್ತಿ ಸರ್ವೆ ನಂಬರ್ 820 ವಿಸ್ತೀರ್ಣ 4 ಎಕರೆ 9 ಗುಂಟೆ ಜಮೀನು ಖರೀದಿ ಮಾಡಿದ ಜಮೀನು ಆಗಿರುತ್ತದೆ. ಅದನ್ನು ಯಾವಾಗ ಖರೀದಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಯು 1ನೇ ಪ್ರತಿವಾದಿಯ ತಂದೆ ಅಬ್ದುಲ್ ಸಾಬ್ ಎನ್ನುವವರ ಹೆಸರಿಗೆ ರಿಜಿಸ್ಟರ್ ಮಾಡಲಾಗಿದೆ. ಸದರಿ ಜಮೀನನ್ನು 40 ಸಾವಿರ ರೂಪಾಯಿಗೆ ಖರೀದಿಸಲಾಗಿದೆ. ಸದರಿ ಜಮೀನನ್ನು ಒಬ್ಬ ಖತ್ತಲ್ ಸಾಬ್ ತಂದೆ ಖಾದರ್ ಸಾಬ್ ಎನ್ನುವವರು ಮಾರಾಟ ಮಾಡಿರುತ್ತಾರೆ. ಸದರಿ ಜಮೀನು ಖರೀದಿ ವ್ಯವಹಾರದ ಕಾಲಕ್ಕೆ ನಾನು 10-15 ವರ್ಷದವನಾಗಿದ್ದೆ. ಸದರಿ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

ದಾವಾ ಮನೆ ಆಸ್ತಿ ನಂಃ 15-74 ನ್ನು ಖರೀದಿ ಮಾಡಿದ ಆಸ್ತಿಯಾಗಿರುತ್ತದೆ. ಆ ಮನೆಯ ವಿಸ್ತೀರ್ಣ ಅಂದರೆ ಎಷ್ಟು ಅಡಿ ಅಗಲ ಮತ್ತು ಎಷ್ಟು ಅಡಿ ಉದ್ದ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ಮೊದಲು ಖಾಲಿ ಪ್ಲಾಟ್ ಆಗಿತ್ತು. ಸದರಿ ಖಾಲಿ ಪ್ಲಾಟನ್ನು ಒಬ್ಬ ಭಾಷಾ ಎನ್ನುವವರು ಮಾರಾಟ ಮಾಡಿದ್ದರು. ಸದರಿ ಪ್ಲಾಟನ್ನು 1ನೇ ಪ್ರತಿವಾದಿಯ ಹೆಂಡತಿ ಶ್ರೀಮತಿ. ಶರೀಫಾ ಎನ್ನುವವರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ. ಸದರಿ ಪ್ಲಾಟ ಪಂಚಾಯಿತಿ ದಾಖಲೆಗಳಲ್ಲಿ ಶ್ರೀಮತಿ. ಶರೀಫಾ ಎನ್ನುವವರ ಹೆಸರಿನಲ್ಲಿ ಇರುತ್ತದೆ. ಸದರಿ ಪ್ಲಾಟನ್ನು ಎಷ್ಟು ವರ್ಷದ ಹಿಂದೆ ಖರೀದಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ಲಾಟನ್ನು ಖರೀದಿ ಮಾಡುವ ಕಾಲಕ್ಕೆ ನನ್ನ ವಯಸ್ಸು ಅಂದಾಜು 20 ವರ್ಷ ಇದ್ದಿತ್ತು. ಸದರಿ ಪ್ಲಾಟನ್ನು ಎಷ್ಟು ರೂಪಾಯಿಗೆ ಖರೀದಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ಲಾಟನ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

ದಾವಾ ಮನೆ ಆಸ್ತಿ ನಂಃ 16-62 ಇದು ಹಿರಿಯರಿಂದ ಬಂದಿರುವ ಆಸ್ತಿಯಾಗಿರುತ್ತದೆ. ಸದರಿ ಮನೆಯ ಆಸ್ತಿಯು 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. 1ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗುವ ಮುಂಚೆ ಆ ಮನೆ ನನ್ನ ಅಜ್ಜ ದಾವುಲ್ ಸಾಬ್ ಎನ್ನುವವರ ಹೆಸರಿನಲ್ಲಿ ಇದ್ದಿತ್ತು. ಸದರಿ ಮನೆ ಅಸ್ತಿ 1ನೇ ಪ್ರತಿವಾದಿಯ ಹೆಂಡತಿ ಶ್ರೀಮತಿ.ಶರೀಫಾ ಎನ್ನುವವರು ಒಬ್ಬ ಅಬ್ಬಾಸ್ ಅಲಿ ಮುಲ್ಲಾ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು 22 ಸಾವಿರ ರೂಪಾಯಿಗಳಿಗೆ ಖರೀದಿಸಲಾಗಿದೆ ಎಂದರೆ ಸರಿ. ಆ ಮನೆಯ ವಿಸ್ತೀರ್ಣ ಅಂದರೆ ಎಷ್ಟು ಅಡಿ ಅಗಲ ಮತ್ತು ಎಷ್ಟು ಅಡಿ ಉದ್ದ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ಮನೆ ಆಸ್ತಿ ಖರೀದಿಮಾಡಿದಾಗನಿಂದ ಪಂಚಾಯಿತಿ

ದಾಖಲೆಗಳಲ್ಲಿ ಶ್ರೀಮತಿ. ಶರೀಫಾ ಎನ್ನುವವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ.

ದಾವಾ ಮನೆ ಆಸ್ತಿ ನಂಃ 12-100 ನ್ನು ಮೊದಲು ಖಾಲಿ ಪ್ಲಾಟ ಇದ್ದಾಗ ಖರೀದಿ ಮಾಡಿದ ಆಸ್ತಿಯಾಗಿರುತ್ತದೆ. ಆ ಮನೆಯ ವಿಸ್ತೀರ್ಣ ಅಂದರೆ ಎಷ್ಟು ಅಡಿ ಅಗಲ ಮತ್ತು ಎಷ್ಟು ಅಡಿ ಉದ್ದ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಅದನ್ನು ಎಷ್ಟು ರೂಪಾಯಿಗಳಿಗೆ ಖರೀದಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಅದನ್ನು ಯಾರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ಮೊದಲು ಒಬ್ಬ ಸದಾಶಿವರೆಡ್ಡಿ ಎನ್ನುವವರಿಗೆ ಸಂಬಂದಿಸಿದ್ದು ಆಗಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಸದರಿ ಮನೆಯನ್ನು 3 ನೇ ಪ್ರತಿವಾದಿಯ ಹೆಂಡತಿ ಶ್ರೀಮತಿ.ಮಾಲನಬೀ ಇವರು ಸದಾಶಿವರೆಡ್ಡಿ ಇವರಿಂದ 26 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಷ್ಟು ರೂಪಾಯಿಗಳಿಗೆ ಖರೀದಿ ಮಾಡಿರುತ್ತಾರೋ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಖರೀದಿ ಮಾಡಿದಾಗಿನಿಂದ ಅದನ್ನು ಶ್ರೀಮತಿ. ಮಾಲನಬೀ ಇವರ ಹೆಸರಿನಲ್ಲಿ ಪಂಚಾಯಿತಿ ದಾಖಲೆಗಳಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ.

ದಾವಾ ಮನೆ ಆಸ್ತಿ ನಂಃ 17-37/1 ಇದು ಹಿರಿಯರಿಂದ ಬಂದಿರುವ ಆಸ್ತಿಯಾಗಿರುತ್ತದೆ. ಸದರಿ ಮನೆ ಆಸ್ತಿಯು ಮುಂಚೆ ನಮ್ಮ ಅಜ್ಜ ದಾವುಲ್ ಸಾಬ್ ಇವರ ಹೆಸರಿನಲ್ಲಿ ಇದ್ದಿತ್ತು. ಈಗ ಸಾದ್ಯ ಸದರಿ ಆಸ್ತಿ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಒಬ್ಬ ಶ್ರೀಮತಿ. ಶಮೀಮ್ ಗಂಡ ನಭೀ ರಸೂಲ್ ಎನ್ನುವವರಿಗೆ ಸಂಬಂದಿಸಿದ್ದು ಎಂದರೆ ನನಗೆ ಗೊತ್ತಿಲ್ಲ. ಸದರಿ ಶ್ರೀಮತಿ ಶಮೀಮ್ ಇವರು ಆ ಆಸ್ತಿಯನ್ನು 1 ನೇ ಪ್ರತಿವಾದಿಯ ಹೆಂಡತಿ ಶ್ರೀಮತಿ.ಶರೀಫಾ ಇವರಿಗೆ 2 ಲಕ್ಷ 50 ಸಾವಿರ ರೂಪಯಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ ಅಂದರೆ ಎಷ್ಟು ಅಡಿ ಅಗಲ ಮತ್ತು ಎಷ್ಟು ಅಡಿ ಉದ್ದ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ಮನೆ ಆಸ್ತಿಗೆ ಸಂಬಂಧಿಸಿದ ದಾಖಲೆ ನಿಪಿ 45 ರಲ್ಲಿ ಶ್ರೀಮತಿ. ಶರೀಫಾಬೀ ಗಂಡ ಇಕ್ಬಲ್ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಸ್ವತ ನಾನೇ ಸಲ್ಲಿಸಿರುತ್ತೇನೆ. ಸದರಿ ದಾಖಲೆಗಳನ್ನು ಈ ದಾವೆಯಲ್ಲಿ ಸಲ್ಲಿಸುವ ಮುಂಚೆ ಆ ಆಸ್ತಿಗಳು ಯಾರ ಹೆಸರಿನಲ್ಲಿ ಇರುತ್ತವೆ ಎಂದು ಪರಿಶೀಲನೆ ಮಾಡಿ /ತಿಳಿದ್ದುಕೊಂಡು ಸಲ್ಲಿಸಿರುತ್ತೇನೆ. ಸದರಿ ಶ್ರೀಮತಿ. ಶರೀಫಾ ಬೀ ಮತ್ತು ಮಾಲನಬೀ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಈ ದಾವೆಯಲ್ಲಿನ "ಸಿ" ಶೆಡ್ಯೂಲ್ಡ್ ದಾವಾ ಆಸ್ತಿಗಳು ನನಗಾಗಲಿ ಮತ್ತು ನನ್ನ ತಂದೆಗಾಗಲಿ ಸಂಬಂದಿಸಿದ್ದವು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿನ "ಸಿ" ಶೆಡ್ಯೂಲ್ಡ್ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿ ಇರುತ್ತವೆಯೋ ಅವರೇ ಆ ಆಸ್ತಿಗಳ ಮಾಲೀಕರು ಮತುತ ಕಬ್ಜೆದಾರರು ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಸಂಗತಿಗಳು ನನಗೆ

ಗೊತ್ತಿದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.